ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನಾನು ಪ್ರತಿವಾದಿಯ ಎಸ್ ಪಿ ಎ ಹೋಲ್ಡರ್ ಆಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ 1 ಮತ್ತು 3 ರವರ ಪರವಾಗಿ ಮುಖ್ಯ ವಿಚಾರಣೆ ಪತ್ರವನ್ನು ಹಾಕಿಲ್ಲ ಎಂದರೆ ಸಾಕ್ಷಿ ನಾನು 2 ನೇ ಪ್ರತಿವಾದಿ ಪರ ಮಾತ್ರ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ದಾಖಲಾತಿಗಳನ್ನು ನಾನು ನೋಡಿದ್ದೇನೆ. ದಾವಾಸ್ವತ್ತು ಮೂಲತಃ ಕೆಂಚತಿಮ್ಮಯ್ಯ @ ಕೆಂಚಂಗಪ್ಪ ನವರ ಸ್ವತ್ತು ಎಂದರೆ ಸರಿ. ದಾವಾಸ್ವತ್ತಿನ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಕೆಂಚತಿಮ್ಮಯ್ಯ @ ಕೆಂಚಂಗಪ್ಪ ನವರಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಸದರಿಯವರು ರಂಗಪ್ಪ , ಸೀನಪ್ಪ ಮತ್ತು ಗೋವಿಂದಯ್ಯ. ಗೋವಿಂದಯ್ಯನ ಮೊದಲನೆ ಹೆಂಡತಿ 1ನೇ ಪ್ರತಿವಾದಿ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು 1ನೇ ಪ್ರತಿವಾದಿ ಮತ್ತು ಗೋವಿಂದಯ್ಯನ ಮಕ್ಕಳು ಎಂದರೆ ಸರಿ. 1ನೇ ವಾದಿಯು ಗೋವಿಂದಯ್ಯನ 2 ನೇ ಹೆಂಡತಿ ಮತ್ತು ವಾದಿ 2 ಮತ್ತು 3 ರವರು ಅವರ ಮಕ್ಕಳು ಎಂದರೆ ಸರಿ. ಕೆಂಚತಿಮ್ಮಯ್ಯ @ ಕೆಂಚಂಗಪ್ಪ ನ ಮೂರು ಜನ ಮಕ್ಕಳು ಅವರ ಕುಟುಂಬದ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ವಿಭಾಗದ ಮೂಲಕ ದಾವಾಸ್ವತ್ತು ಮತ್ತು ಇತರೆ ಸ್ವತ್ತುಗಳು ಗೋವಿಂದಯ್ಯನ ಭಾಗಕ್ಕೆ ಬಂದಿದೆ ಎಂದರೆ ಸರಿ. ನಾನು ಶಶಿಕಲಾ ವರವರನ್ನು 1995 ರಲ್ಲಿ ಮದುವೆಯಾದೆನು . 1995 ರ ಹಿಂದೆ ಗೋವಿಂದಯ್ಯನ ಕುಟುಂಬದಲ್ಲಿ ಏನು ನಡೆದಿದೆ ಎಂದು ನಾನು ಮದುವೆಯಾದ ನಂತರ ಕೇಳಿ ತಿಳಿದುಕೊಂಡಿದ್ದೇನೆ. 1ನೇ ಪ್ರತಿವಾದಿಗೆ 75 ವರ್ಷ ವಯಸ್ಸು , ಆಕೆ ಆರೋಗ್ಯವಾಗಿದ್ದಾಳೆ ಎಂದರೆ ಸಾಕ್ಷಿ ಅವರ

ಆರೋಗ್ಯ ಸರಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಸಾಕ್ಷಿ ನುಡಿಯುವಾಗ ನನ್ನ ಹೆಂಡತಿ, ನನ್ನ ಅತ್ತೆ ನ್ಯಾಯಾಲಯದಲ್ಲಿ ಹಾಜರು ಇದ್ದರು ಎಂದರೆ ಸರಿಯಲ್ಲ ನನ್ನ ನಾಧಿನಿ ಹಾಜರು ಇದ್ದಳು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ಅವರನ್ನು ಕರೆಸಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಗೋವಿಂದಯ್ಯ ಬೆಂಗಳೂರು ಡೈರಿಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದರು ಎಂದರೆ ಸರಿ. ದಿನಾಂಕ 09.07.1987 ರಂದು ನನ್ನ ಮಾವ ವೃತ್ತಿಯಲ್ಲಿರುವಾಗಲೇ ಅಪಘಾತದಲ್ಲಿ ತೀರಿಕೊಂಡರು ಎಂದರೆ ಸರಿ. ನನ್ನ ಮಾವನವರು ತೀರಿಕೊಂಡ ನಂತರ ನಮ್ಮ ಕುಟುಂಬದಲ್ಲಿ ಸಾಕಷ್ಟು ವ್ಯಾಜ್ಯಗಳು ನಡೆಯುತ್ತಿವೆ ಎಂದರೆ ಸರಿಯಲ್ಲ. 1991 ರಿಂದ ವ್ಯಾಜ್ಯಗಳು ನಡೆದುಕೊಂಡು ಬರುತ್ತಿವೆ ಎಂದರೆ ಅಷ್ಟೊಂದು ವ್ಯಾಜ್ಯ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ದಾವಾಸ್ವತ್ತುಗಳು ಗೋವಿಂದಯ್ಯನ ಮೊದಲನೆ ಹೆಂಡತಿ 1ನೇ ಪ್ರತಿವಾದಿ ಮತ್ತು 2ನೇ ಹೆಂಡತಿ 1ನೇ ವಾದಿಯವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಇತ್ತು ಎಂದರೆ ಸರಿ. ಆರ್.ಎ.ಎಲ್.ಕೆ.ಪಿ. ನಂ.17/1990-91ರ ರೀತ್ಯ 1 ನೇ ಪ್ರತಿವಾದಿಯು ಜಂಟಿ ಖಾತೆಯನ್ನು ಪ್ರಶ್ನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗೋವಿಂದಂಯ್ಯನವರು ತೀರಿಕೊಂಡ ನಂತರ ಪಿ ಆಂಡ್ ಎಸ್ ಸಿ 119/89ರ ರೀತ್ಯ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣವು ಇಬ್ಬರ ಮಧ್ಯದಲ್ಲಿ ರಾಜಿಯಾಯಿತು ಎಂದರೆ ಸರಿ. ರಾಜಿ ಪ್ರಕಾರದಂತೆ 1ನೇ ಪ್ರತಿವಾದಿಯು ಡೆತ್ ಬೆನಿಫಿಟ್ ಅನ್ನು ಮತ್ತು ಪೆನ್ಶನ್ ಅನ್ನು ಕೊಡಲಾಯಿತು ಎಂದರೆ ಸರಿ. ಅದೇ ರೀತಿ ಅಪಘಾತ ಆಗಿದೆ ಎಂದು ಎಂ ವಿ ಸಿ ನಂ.1654/87 ರಲ್ಲಿ ಬಂದಂದತಹ ಪರಿಹಾರದ ಹಣವನ್ನು 1ನೇ

ಪ್ರತಿವಾದಿಗೆ ಕೊಡಲಾಯಿತು ಎಂದರೆ ಸಾಕ್ಷಿ ಎಎಲ್ಲರೂ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಾದಿಯು ಎಂವಿಸಿ 35/88 ಎಂದು ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಎಂ ವಿ ಸಿ ನಂ.35/88 ಅನ್ನು ಪಿ ಆಂಡ್ ಎಸ್ ಸಿ ಯಲ್ಲಿ ಆದ ರಾಜಿ ಪ್ರಕಾರ ವಾಪಸ್ಸು ಪಡೆಯಲಾಯಿತು ಎಂದರೆ ಸಾಕ್ಷಿ ಆಗಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿ ಆಂಡ್ ಎಸ್ ಸಿ ಯಲ್ಲಿಯೇ ರಾಜಿ ಮಾಡಿಕೊಂಡು 1ನೇ ಪ್ರತಿವಾದಿಯು ಎಂ ವಿ ಸಿ ಯನ್ನು ಮುಂದುವರೆಸಿಕೊಂಡು ಅವರೇ ಪರಿಹಾರ ತೆಗೆದುಕೊಳ್ಳಬಹುದು ಎಂದು ತೀರ್ಮಾನ ಆಯಿತು ಎಂದರೆ ಆಗಿರಬಹುದು ಅವರವರೆ ರಾಜಿ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅಂಥಹ ರಾಜಿ ಮೆಮೋದಲ್ಲಿ ಕಾಂಪನ್ಸೇಟರಿ ಗ್ರೌಂಡ್ ನಲ್ಲಿ ಕೆಲಸವನ್ನು 1 ನೇ ವಾದಿಗೆ ಕೊಡಲಾಯಿತು ಎಂದರೆ ಸರಿ. 1 ನೇ ವಾದಿಯು ಸೇವೆ ಸಲ್ಲಿಸಿ ಈಗ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ದಿನಾಂಕ 14.06.1992 ರಲ್ಲಿ 1ನೇ ಹೆಂಡತಿ ಮತ್ತು 1ನೇ ಪ್ರತಿವಾದಿ ಇಬ್ಬರೂ ವಿಭಾಗವನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಸರ್ವೆ ನಂ.503 ರಲ್ಲಿ 2 ಎಎಕರೆ 11 ಗುಂನಟೆ ಸರ್ವೆ ನಂ.318 ರಲ್ಲಿ 16 ಗುಂಟೆ ಸವೆ ನಂ.377/2 ರಲ್ಲಿ 20 ಗುಂಟೆ , ಸರ್ವೆ ನಂನ.179 ರಲ್ಲಿ 6 ಗುಂಟೆ ಜಮೀನು 1ನೇ ವಾದಿಗೆ ಭಾಗಾಂಶದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ, 2005 ರಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಮೇಲೆ ಹೇಳಿದ ಎಲ್ಲಾ ಆಸ್ತಿಗಳನ್ನು ಶಶಿಕಲಾ ಒಬ್ಬರನ್ನು ಬಿಟ್ಟು ಉಳಿದವರೆಲ್ಲಾ ಮಾರಿದ್ದಾರೆ ಎಂದು ನುಡಿಯುತ್ತಾರೆ, ಅಲ್ಲಿಯವರೆಗೂ ಜಂಟಿ ಖಾತೆಯಲ್ಲಿತ್ತು ಎಂದು ನುಡಿಯುತ್ತಾರೆ. ಗೋವಿಂದಯ್ಯನವರು ತೀರಿಕೊಂಡ ನಂತರ ಯಾವುದೇ ಆಸ್ತಿಯು 1 ನೇ ಪ್ರತಿವಾದಿಗೆ ಬಂದಿಲ್ಲವಾ ಎಂದು ಕೇಳಿದಾಗ ಸಾಕ್ಷಿಯು ಯಾವುದೂ ಕೂಡ ಅವರೊಬ್ಬರಿಗೆ ಬಂದಿಲ್ಲ 1ನೇ ವಾದಿ ಮತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿಯೇ ಇತ್ತು

ಎಂದು ಸಾಕ್ಷಿ ನುಡಿಯುತ್ತಾರೆ. 1ನೇ ಪ್ರತಿವಾದಿಯು ತಾನು ಖಾತೆ ಬದಲಾವಣೆ ಮಾಡಿಕೊಳ್ಳದೇ ಇರುವ ಉದ್ದೇಶದಿದಂದ ಜಂಟಿ ಎಂದು ಇದ್ದ ಕಾರಣ 1ನೇ ಪ್ರತಿವಾದಿಯ ಕುಟುಂಬದ ಅವಶ್ಯಕತೆಗೋಸ್ಕರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ಎಲ್ಲಾ ಒಟ್ಟಿಗೆ ಮಾರಿದ್ದಾರೆ ಎಂದು ನುಡಿಯುತ್ತಾರೆ.

ಊರಿನ ಒಳಗೆ ಇದ್ದಂತಹ 30 -40 ಸೈಟನ್ನು 14.06.1992ರ ವಿಭಾಗಪತ್ರದ ಮೂಲಕ ವಾದಿ ಕುಟುಂಬಕ್ಕೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ಸೈಟಿನ ಬಗ್ಗೆ ಓ ಎಸ್ ನಂ.157/2005 ರ ರೀತ್ಯ ಕೇಸನ್ನು ಹಾಕಿಕೊಂಡಿದ್ದರು ಆ ಕೇಲಸಿನಲ್ಲಿ ರಾಜಿ ಮಾಡಿಕೊಂಡು ಅದರಲ್ಲಿ ಸೈಟನ್ನು 1 ನೇ ವಾದಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಿಭಾಗಪತ್ರದ ಪ್ರಕಾರ ಸರ್ವೆ ನಂ.335/1 ರಲ್ಲಿ 1 ಎಕರೆ 18 ಗುಂಟೆ ಜಮೀನು ಮತ್ತು ದಾವಾಸ್ವತ್ತು ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ, 1 ಎಕರೆ 18 ಗುಂಟೆ ಅವರ ಭಾಗಕ್ಕೆ ಓ ಎಸ್ ನಂ.157/2005ರ ಕೇಸಿನ ರಾಜಿಯಲ್ಲಿ ಅವರ ಭಾಗಕ್ಕೆ ಹೋಗಿರುತ್ತದೆ ಅದನ್ನು ಮಾರಾಟ ಕೂಡ ಮಾಡಿರುತ್ತಾರೆ ಎಂದು ನುಡಿಯುತ್ತಾರೆ, ದಾವಾಸ್ವತ್ತು ಹೋಗಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಪೂರ್ವ ದಿಕ್ಕಿನಲ್ಲಿ 4 ರಿಂದ 12 ನೇ ಪ್ರತಿವಾದಿಗಳ ಸ್ವತ್ತು ಇದೇ ಸರ್ವೆ ನಂಬರ್ ನಲ್ಲಿ ಇದೆ ಎಂದರೆ ಸರಿಯಲ್ಲ ಅವರೆಲ್ಲಾ ಮಾರಾಟ ಮಾಡಿಕೊಂಡಿದ್ದಾರೆ ಈಗ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾಸ್ವತ್ತಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿ 4 ಮತ್ತು 9 ರವರ ಕುಟುಂಬ ಇದ್ದುದ್ದರಿಂದ ದಾವಾಸ್ವತ್ತನ್ನು ಸದರಿಯವರಿಗೆ ಪಾಲು ಮಾಡಿಕೊಳಲು ಕೊಡಲಾಗಿತ್ತು ಎಂದರೆ ಸರಿಯಲ್ಲ.

1ನೇ ವಾದಿ ಮತ್ತು ಅವರ ಕುಟುಂಬದವರು ಮದುವೆಯಾದಾಗಿನಿಂದ

ಬೆಂಗಳೂರು ಡೈರಿ ಕ್ವಾ ಟರ್ಸ್ ನಲ್ಲಿ ಗೋವಿಂದಯ್ಯನವರಜೊತೆ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಅವರು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದರಿಂದ ದಾವಾಸ್ವತ್ತನ್ನು ಮಾಡಿಕೊಳ್ಳಲು ಪಾಲಿಗೆ ಪ್ರತಿವಾದಿ 4 ಮತ್ತು 9 ರವರಿಗೆ ಕೊಡಲಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ 4 ಮತ್ತು 9 ರವರ ತಂದೆ ಹೆಸರೂ ಕೂಡ ಕೆಂಚಪ್ಪ @ ಕೆಂಚ ಹನುಮಯ್ಯ ಎಂದರೆ ಇರಬಹುದು ಇರುತ್ತೆ ಎಂದು ನುಡಿಯುತ್ತಾರೆ. ನಮ್ಮ ಮೂಲ ಪುರುಷನ ಹೆಸರು ಕೂಡ ಕೆಂಚತಿಮ್ಮಯ್ಯ @ ಕೆಂಚಂಗಪ್ಪ ಎಂದು ಇದ್ದುದ್ದರಿಂದ ಮತ್ತು ಪ್ರತಿವಾದಿ 4 ಮತ್ತು 9 ರವರ ಹೆಸರಿಗೆ ತಾಳೆ ಆಗುವುದರಿಂದ ಈ ದಾವಾಸ್ವತ್ತನ್ನು ಪ್ರತಿವಾದಿ 4 ಮತ್ತು 9 ರವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಆ ರೀತಿ ಖಾತೆಯನ್ನು 4 ಮತ್ತು 9 ನೇ ಪ್ರತಿವಾದಿಗು ಮಾಡಿಸಿಕೊಂಡಿರುವುದರಿಂದ ಒ ಎಸ್ ನಂ.13/2008 ರ ರೀತ್ಯ ದಾವೆಯನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. 4 ಮತ್ತು 9ನೇ ಪ್ರತಿವಾದಿಗಳು ದಾವಾಸ್ವತ್ತನ್ನು ಸೇರಿಸಿ 13 ನೇ ಪ್ರತಿವಾದಿಗೆ ಕಾನೂನು ಬಾಹಿರವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಒ ಎಸ್ 13/2008 ರಲ್ಲಿ ವಾದಿ 2 ಮತ್ತು 3 ರವರನ್ನು ಬಿಟ್ಟು ಕೇಸನ್ನು ಹಾಕಿದ್ದೇನೆ ಎಂದರೆ ಸರಿ ಆದರೆ 1 ನೇ ವಾದಿಯನ್ನು ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ಒ ಎಸ್ ನಂ .13/2008 ಪೆಂಡಿಂಗ್ ಇರುವಾಗಲೆ ಒ ಎಸ್ ನಂ.157/2005 ಅನ್ನು ಭಾಗಕ್ಕೆ ಹಾಕಿದ್ದೇವೆ ಎಂದರೆ ಸಾಕ್ಷಿ ಅದನ್ನು ಮೊದಲೇ ಹಾಕಿದ್ದೆವು ಅದು ರಾಜಿ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಒ ಎಸ್ ನಂ.157/2005 ರಲ್ಲಿ ರಾಜಿ ಮಾಡಿಕೊಂಡು ವಿಭಾಗ ಮಾಡಿಕೊಳ್ಳುವಾಗ ಒ ಎಸ್ ನಂ.13/2008 ಇನ್ನೂ ನಡೆಯುತ್ತಿತುತ ಎಂದರೆ ಸರಿ. ಒ ಎಸ್ ನಂ. 13/2008 ಅನ್ನು ಭಾಗಕ್ಕೋಸ್ಕರ ಹಾಕಲಾಗಿತ್ತು. ಎರಡೂ ಕೇಸುಗಳು

ಒಂದೇ ನ್ಯಾಯಾಲಯದಲ್ಲಿ ಇತ್ತು ಎಂದರೆ ಸರಿ. 2005 ನೇ ಕೇಸಿನಲ್ಲಿ ಮಾತ್ರ 1 ರಿಂದ 3 ನೇ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ, ಆದರೆ 13/2008 ರಲ್ಲಿ 1 ನೇ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಓ ಎಸ್ ನಂ.157/2005 ರಲ್ಲಿ ವಾಧಿ ಪ್ರತಿವಾದಿ 1 ರಿಂದ 3 ಮತ್ತು ಗೋವಿಂದಯ್ಯನವರ ಸಂಬಂಧಗಳ ಬಗ್ಗೆ ನಾನು ಹೇಳಿದ್ದೇನೆ ಎಂದರೆ ಸರಿ . ಓ ಎಸ್ ನಂ .13/2008 ರಲ್ಲಿ 1 ನೇ ಪ್ರತಿವಾದಿ ಮತ್ತು ವಾದಿಗಳ ಸಂಬಂಧದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ ಹೇಳಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಓ ಎಸವ್ 13/2008, 2 ಮತ್ತು 3ನೇ ವಾದಿಗಳು ಪಕ್ಷಗಾರರಲ್ಲದೆ ನ್ಯಾಯಾಲಯದಲ್ಲಿ ಡಿಕ್ರಿಯಾಗಿದೆ ಎಂದರೆ ಸರಿ. ಓಎಸ್ ನಂ .13/08 ರಲ್ಲಿ 1 ನೇ ವಾದಿಯ ಕರೇನಳ್ಳಿಯ ವಿಳಾಳವನ್ನು ಕೊಟ್ಟಿದ್ದೇನೆ. ಈಗತಾನೆ 1 ನೇ ವಾದಿ ಮತ್ತು ಗೋವಿಂದಯ್ಯ ಬೆಂಗಳೂರಿನಲ್ಲಿ ಮದುವೆಯಾದಾಗಿನಿಂದ ವಾಸಮಾಡಿಕೊಡಿಂದ್ದರು ಎಂದು ಹೇಳಿದ್ದೇನೆ ಎಂದರೆ ಸರಿ ಆದರೆ ವ್ಯವಹಾರವನ್ನು ಕರೇನಹಳ್ಳಿಗೆ ಬಂದು ಹೋಗಿ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಓ ಎಸ್ ನಂ.13/2008 ರಲ್ಲಿ ಲಕ್ಷ್ಮಮ್ಮ ನವರ ವಿಳಾಸವನ್ನು ತಪ್ಪಾಗಿ ನ್ಯಾಯಾಲಯಕ್ಕೆ ನೀಡಿ ಏಕಪಕ್ಷೀಯಮಾಗಿ ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಶ ಕೋರಲಾಗಿದ್ದು ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.